**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No.627/2023**

**PW-1 CW-1**

| | | |
|---|---|---|
| ಸಾಕ್ಷಿದಾರನ ಹೆಸರು | : | ರಮೇಶ ತಂದೆ ಶಿವಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಲ್ಲಾಪುರ, ಹಾಲಿ ವಸತಿ ಮುಷ್ಟೂರು ಕ್ರಾಸ್ |
| ಪ್ರಮಾಣಿಕರಿಸಿದ ದಿನಾಂಕ | : | 28-02-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-2 ರಿಂದ 5 ರವರ ಪರಿಚಯ ಇರುತ್ತದೆ. ಈಗ ಅಂದಾಜು 09 ವರ್ಷಗಳ ಹಿಂದೆ ಮುಷ್ಟೂರು ಕ್ರಾಸ್‌ನಲ್ಲಿ ಕುರಿಗಳನ್ನು ನಿಲ್ಲಿಸಿದ್ದು ಅಲ್ಲಿಯೇ ಪಕ್ಕದಲ್ಲಿ ಗುಡಿಸಲು ಹಾಕಿಕೊಂಡು ರಾತ್ರಿ ಮಲಗಿರುವ ವೇಳೆ ಯಾರೋ ಕಳ್ಳರು ನಮ್ಮ ಹತ್ತಿರವಿರುವ 130 ಕ್ಕಿಂತ ಹೆಚ್ಚಿನ ಕುರಿಗಳಲ್ಲಿ 24 ಕುರಿಗಳನ್ನು ಕಳ್ಳತನಮಾಡಿಕೊಂಡು ಹೋಗಿರುತ್ತಾರೆ. ಬೆಳಗಿನ 4-00 ಗಂಟೆಗೆ ಎದ್ದು ಕುರಿಗಳನ್ನು ನೋಡಲಾಗಿ ಅವುಗಳಲ್ಲಿ ಕಡಿಮೆ ಇರುವುದು ಕಂಡುಬಂದಿದ್ದು ನಂತರ ಠಾಣೆಗೆ ಹೋಗಿ ಕುರಿಗಳು ಕಳ್ಳತನ ಆಗಿರುತ್ತವೆ ಎಂದು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ದೂರಿನ ಮೆಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಡಿ.ಸಿ ವಕೀಲರಿಂದ.**

ನಮಗೆ ಸೇರಿದ ಮನೆ ಮತ್ತು ಹೊಲಗಳು ಮಲ್ಲಾಪುರ ಗ್ರಾಮದಲ್ಲಿ ಇವೆ ಎಂದರೆ ಸರಿ. ಮುಷ್ಟೂರು ಕ್ರಾಸ್‌ನಲ್ಲಿ ದುಡಿದು ತಿನ್ನಲು ಬಂದು ನೆಲೆಸಿರುತ್ತೆವೆ. ನಮ್ಮೊಂದಿಗೆ ನಮ್ಮೂರಿನ ಇತರರು ಕೂಡ ದುಡಿದು ತಿನ್ನಲು ಮುಷ್ಟೂರು ಕ್ರಾಸ್‌ಗೆ ಬಂದಿರುತ್ತಾರೆ. ಮುಷ್ಟೂರು ಕ್ರಾಸ್‌ನಲ್ಲಿ ಗುಡಿಸಲು ಹಾಕಿಕೊಂಡು ವಾಸವಿರುತ್ತೇನೆ. ಸದರಿ ಕುರಿಗಳನ್ನು ತಂತಿ ಬೇಲಿ ಸುತ್ತಲೂ ಹಾಕಿ ಮೇಲೆ ಶೆಡ್ಡನ್ನು ಹಾಕಲಾಗಿತ್ತು. ಕುರಿದೊಡ್ಡಿಯಿಂದ ಅಂದಾಜು 10 ಅಡಿ ಅಂತರದಲ್ಲಿ ಮಲಗಿರುತ್ತೇವೆ. ಕುರಿಗಳ ಶೆಡ್ಡಿನಲ್ಲಿ ಬೆಳಕಿನ ವ್ಯವಸ್ಥೆ ಇರುವುದಿಲ್ಲ. ನಾನು ಒಂದು ನಾಯಿಯನ್ನೂ ಸಹ ಸಾಕಿದ್ದೆ. ಸಾಮಾನ್ಯವಾಗಿ ಕುರಿದೊಡ್ಡಿಯ ಹತ್ತಿರ ಅಪರಿಚಿತರು ಬಂದರೆ ನಾಯಿ ಬೊಗಳುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನಾಯಿ ಬೋಗಳುವ ಶಬ್ದ ಕೇಳಿ ನನಗೆ ಎಚ್ಚರವಾಗಿ ನೋಡುತ್ತೇವೆ ಎಂದರೆ ಸಾಕ್ಷಿಯು ನಿದ್ದೆ ಹತ್ತಿದ್ದರಿಂದ ನೋಡಲಾಗಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕುರಿದೊಡ್ಡಿಗೆ ಹಾಕಿದ ಮುಳ್ಳಿನ ಬೇಲಿಗಳನ್ನು ಯಾರಾದರೂ ತೆಗೆಯಲು ಪ್ರಯತ್ನಿಸಿದಾಗ ಕುರಿಗಳು ಶಬ್ದ ಮಾಡುತ್ತವೆ ಎಂದರೆ ಸರಿ, ಸದರಿ ದಿನ ಮಳೆ ಬಂದಿದ್ದರಿಂದ ಕುರಿಗಳು ಶಬ್ದ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಮಳೆ ಬರುವುದರಿಂದ

ಕುರಿಗಳು ಮಲಗಿರುತ್ತವೆ ಎಂದು ನುಡಿಯುತ್ತಾರೆ. ಮುಷ್ಟೂರು ಕ್ರಾಸ್‌ನಿಂದ ದೇವದುರ್ಗ ರಾಯಚೂರು ಮುಖ್ಯ ರಸ್ತೆ ಅಂದಾಜು ಅರ್ಧ ಕಿಲೋಮೀಟರ್ ಅಂತರದಲ್ಲಿ ಇರುತ್ತದೆ. ಮುಖ್ಯ ರಸ್ತೆಯಿಂದ ಮುಷ್ಟೂರಿಗೆ ಹೋಗುವ ದಾರಿಯ ಕ್ರಾಸ್‌ನಲ್ಲಿ ಶೆಡ್ಡನ್ನು ಹಾಕಿರುತ್ತೇನೆ. ಸದರಿ ರಸ್ತೆಯಿಂದ ನನ್ನ ಶೆಡ್ಡು ಅಂದಾಜು 25 ಅಡಿ ಅಂತರದಲ್ಲಿ ಇರುತ್ತದೆ. ಕುರಿ ನಿಲ್ಲಿಸಿದ ದೊಡ್ಡಿಯ ಸ್ಥಳದ ಚೆಕ್ಕಬಂದಿ ಹೇಳಲು ಬರುವುದಿಲ್ಲ. ಠಾಣೆಗೆ ದೂರು ನೀಡಲು ನಾನು ಮತ್ತು ನನ್ನ ಮಗ ಹೋಗಿದ್ದೆವು. ಸದರಿ ದೂರು ನೀಡುವಾಗ ನನ್ನ ಮಗನಿಗೆ ಅಂದಾಜು 19 ವರ್ಷ ವಯಸ್ಸು ಇರಬಹುದು. ಕುರಿ ಕಳ್ಳತನವಾಗಿರುವ ಬಗ್ಗೆ ಪೊಲೀಸ ಠಾಣೆಗೆ ಮಾಹಿತಿ ನೀಡಿ ಕುರಿಗಳನ್ನು ಹುಡುಕಿರುತ್ತೇವೆ. ನನಗೆ ಸೇರಿದ 130 ಕ್ಕಿಂತ ಹೆಚ್ಚಿನ ಕುರಿಗಳಲ್ಲಿ 24 ಕುರಿಗಳು ಕಳ್ಳತನವಾಗಿರುತ್ತವೆ ಎಂದು ದೂರು ನೀಡಿರುತ್ತೇನೆ. ಶಹಾಪುರದ ಸಂತೆಯಲ್ಲಿ ನನ್ನ ಕುರಿಗಳನ್ನು ಹುಡುಕಿರುತ್ತೇನೆ. ಪೊಲೀಸರಿಗೆ ಶಹಾಪುರ ಸಂತೆಯಲ್ಲಿ ಹುಡುಕಿರುವ ಬಗ್ಗೆ ನಾನು ಹೇಳಿರುವುದಿಲ್ಲ. ನಾನು ಮುಷ್ಟೂರು ಕ್ರಾಸನಲ್ಲಿ ಕುರಿಗಳೊಂದಿಗೆ ವಾಸವಿದ್ದಾಗ ನನಗೆ ಸೇರಿದ ಕುರಿಗಳಲ್ಲಿ 24 ಕುರಿಗಳು ಕಳ್ಳತನವಾಗಿರುತ್ತವೆ ಎಂದು ಮತ್ತು ಪೊಲೀಸರಿಗೆ ಆ ಕುರಿತು ದೂರು ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.